ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1095 (1409)
2.	ಸದಸ್ಯರ ಹೆಸರು	:	ಶ್ರೀ ಕಾಂತರಾಜ್ (ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3.	ಉತ್ತರಿಸುವ ದಿನಾಂಕ	:	16.03.2021
4.	ಉತ್ತರಿಸುವ ಸಚಿವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ಉದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು)</td><td rowspan="2">ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 1966ನೇ ಸಾಲಿನಲ್ಲಿ ಸ್ಥಾಪನೆಯಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳು ಹಾಗೂ ವಿವಿಧ ಏಕ ಘಟಕ ಸಂಕೀರ್ಣಗಳು ತಮ್ಮ ಯೋಜನೆಗಳನ್ನು ಸ್ಥಾಪಿಸಲು ಹಾಗೂ ರಾಜ್ಯದಿಂದ ಒಂಟಿಯಾಗಿ ಅಥವಾ ಖಾಸಗಿ ವಲಯವು ಭಾಗವಹಿಸುವುದರೊಂದಿಗೆ ಕೈಗಾರಿಕಾ ಮೂಲ ಸೌಲಭ್ಯಗಳನ್ನು ಒದಗಿಸಲು ಸಹ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ.

ಕೆ.ಐ.ಎ.ಡಿ.ಬಿ.ಯ ಉದ್ದೇಶವು ಕೈಗಾರಿಕಾ ಪ್ರದೇಶಗಳ ಸ್ಥಾಪನೆಗಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸುವುದು, ಕೈಗಾರಿಕೆಗಳನ್ನು ಉತ್ತೇಜಿಸುವುದು ಹಾಗೂ ಕ್ರಮಬದ್ಧ ಕೈಗಾರಿಕಾ ಅಭಿವೃದ್ಧಿ ಮಾಡುವುದಾಗಿರುತ್ತದೆ.</td></tr>
<tr><td>(ಆ)</td><td>ಸದರಿ ಮಂಡಳಿಯು ಯಾವ-ಯಾವ ಉದ್ದೇಶಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಮಾಡಿ ಹಸ್ತಾಂತರಿಸಲು ಅಧಿಕಾರ ಹೊಂದಿದೆ; (ಉದ್ದೇಶವಾರು ಮಾಹಿತಿ ನೀಡುವುದು)</td></tr>
</table>

<table>
<tr><td>(ಇ)</td><td>ಭೂ ಉಪಯೋಗ / ಭೂಮಿ ಉಪಯೋಗ (Land use) ಎಂದರೇನು; ಎಷ್ಟು ವಿಧವಾದ ಭೂ ಉಪಯೋಗಗಳಿವೆ; ಸದರಿ ಮಂಡಳಿ ವ್ಯಾಪ್ತಿಯಲ್ಲಿ ಬರುವ ಭೂ ಉಪಯೋಗಗಳಾವುವು;</td><td rowspan="4">ಕೆ.ಐ.ಎ.ಡಿ. ಕಾಯ್ದೆ 1966 ಕಲಂ 3(1)ರಡಿಯಲ್ಲಿ ಕೈಗಾರಿಕಾ ಪ್ರದೇಶಗಳೆಂದು ಘೋಷಿಸಿ, ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ಕಲಂ 28ರಡಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಜರುಗಿಸಲಾಗುತ್ತದೆ.

ಕೆ.ಐ.ಎ.ಡಿ.ಬಿ. ಕಾಯ್ದೆ ಕಲಂ 3(1)ರ ಅಡಿಯಲ್ಲಿ ಕೈಗಾರಿಕಾ ಪ್ರದೇಶವೆಂದು ಘೋಷಿಸಿ ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಕೈಗಾರಿಕೆ ಉದ್ದೇಶಕ್ಕಾಗಿ ಹಾಗೂ ಅಧಿಸೂಚನೆ ಸಂಖ್ಯೆ: ಸಿಐ 86 ಎಸ್.ಪಿಕ್ಯೂ 1990, ದಿನಾಂಕ: 18.03.1991ರ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಬೇಕಾಗಿರುತ್ತದೆ.</td></tr>
<tr><td>(ಈ)</td><td>ಭೂ ಉಪಯೋಗ / ಭೂಮಿ ಉಪಯೋಗ ಬದಲಾವಣೆ (Change of Land use) ಎಂದರೇನು; ಅವುಗಳಲ್ಲಿ ಎಷ್ಟು ವಿಧ; ಅವು ಯಾವುವು; ಮಂಡಳಿಯ ವ್ಯಾಪ್ತಿಯಲ್ಲಿ ಎಷ್ಟು ವಿಧದ Change of Land use ಬರುತ್ತವೆ; (ವಿವರವಾದ ಮಾಹಿತಿ ನೀಡುವುದು)</td></tr>
<tr><td>(ಉ)</td><td>ಜನವರಿ 2019-20 ಹಾಗೂ 2020-21ರವರೆಗೆ ಸದರಿ ಮಂಡಳಿಯ ವ್ಯಾಪ್ತಿಯಲ್ಲಿ ಎಷ್ಟು Change of Land use ಪ್ರಕರಣಗಳು ನಡೆದಿವೆ; (ವಿವರವಾಗಿ ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)</td></tr>
<tr><td>(ಊ)</td><td>Change of Land use ಮಾಡುವ ಅಧಿಕಾರವು ಮಂಡಳಿಗಿದೆಯೇ ಅಥವಾ ಸರ್ಕಾರಕ್ಕಿದೆಯೇ?</td></tr>
</table>

ಸಂಖ್ಯೆ: ಸಿಐ 79 ಐಎಪಿ (ಇ) 2021

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು